


# ಕಂದನಿಗೆ ಯಾವ ಲಸಿಕೆ ಕೊಡಿಸಲಿ?

ಮಗು ಹುಟ್ಟಿದಾಗಿನಿಂದ ಬೆಳೆದು ಪ್ರೌಢಾವಸ್ಥೆಗೆ ಬರುವವರೆಗೆ ಅನೇಕ ರೀತಿಯ ರೋಗ ನಿರೋಧಕ ಲಸಿಕೆಗಳನ್ನು ಹಾಕಿಸಿಕೊಳ್ಳಬೇಆಕಗುತ್ತದೆ. ಈಗ ಸುಮಾರು 25 ತರಹದ ರೋಗ ನಿರೋಧಕ ಲಸಿಕೆಗಳಿದ್ದು, ಇವುಗಳಲ್ಲಿ ಯಾವುದನ್ನು ಹಾಕಿಸಬೇಕು ಎಂಬ ಗೊಂದಲದಲ್ಲಿದ್ದಾರೆ ಪಾಲಕರು. ಇಲ್ಲಿದೆ ಒಂದು ವಿಶ್ಲೇಷಣೆ.

★ ಡಾ.ಎಂ.ಡಿ. ಸೂರ್ಯಕಾಂತ

'ನಮ್ಮೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಮಗುವಿಗೆ ಎಲ್ಲಾ ಲಸಿಕೆ ಹಾಕಿಸಿದ್ದೇನೆ, ಆದರೆ ಪೇಪರಿನಲ್ಲಿ ಫ್ಲೂ ವ್ಯಾಕ್ಸಿನ್ ಬಗ್ಗೆ ಓದಿದೆ. ಇದನ್ನು ಹಾಕಿಸಬೇಕೆ?'

'ಬೆಂಗಳೂರಿನ ಕಾರ್ಪೊರೇಟ್ ಆಸ್ಪತ್ರೆಗೆ ಹೋದಾಗ ವೆರಿಸೆಲ್ಲಾ ವ್ಯಾಕ್ಸಿನ್ ನೀಡಿಲ್ಲವಲ್ಲ ಎಂದು  ಡಾಕ್ಟರ್ ಕೇಳಿದರು. ಇದು ದುಬಾರಿಯಾಗಿತ್ತು ಎಂದು ಮಗುವಿಗೆ ಕೊಡಿಸಲಿಲ್ಲ. ಹಾಕಿಸದಿದ್ದರೆ ತೊಂದರೆಯಾ?'

'ಎಚ್1 ಎನ್1 ತಡೆಯಲು ಲಸಿಕೆ ಇದೆಯಾ ಡಾಕ್ಟ್ರೆ?'..

ಇವೇ ಮುಂತಾದ ಪ್ರಶ್ನೆಗಳು ಹೆತ್ತವರಲ್ಲಿ ಈಗ ಸಾಮಾನ್ಯ. ಏಕೆಂದರೆ ಸುಮಾರು 10 ವರ್ಷದ ಹಿಂದೆ ಕೇವಲ 6 ಲಸಿಕೆಗಳಿದ್ದವು. ಹೆಚ್ಚಿನ ಸಂಶೋಧನೆಯಿಂದಾಗಿ ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಈಗ ಇವುಗಳ ಸಂಖ್ಯೆ 25. ಲಸಿಕೆ ತಯಾರಕರ ಅಬ್ಬರದ ಪ್ರಚಾರ ಹಾಗೂ ಮಾಹಿತಿ ಮೂಲದ ಅಪಾರತೆಯಿಂದ ಆತಂಕಗಳು ಸಹಜ.

## ಅತ್ಯವಶ್ಯಕ ಲಸಿಕೆ

ಲಸಿಕೆಗಳಲ್ಲಿ ಎರಡು ವಿಧ. ಸರ್ಕಾರದ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಂತೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ 9 ತರಹದ ಲಸಿಕೆಗಳನ್ನು 13 ತರಹದ ಕಾಯಿಲೆಗಳಿಂದ ರಕ್ಷಿಸಲು ಮಕ್ಕಳಿಗೆ ನೀಡಲಾಗುತ್ತಿದ್ದು, ಇವುಗಳು ಕಡ್ಡಾಯ, ಅತ್ಯವಶ್ಯಕ ಲಸಿಕೆಗಳೆಂದು ಹೆಸರು ಪಡೆದಿದೆ. ಇವು ವಿಶ್ವ ಆರೋಗ್ಯ ಸಂಸ್ಥೆ, ಕೇಂದ್ರ ಹಾಗೂ ಕರ್ನಾಟಕ ಸರ್ಕಾರ ಶಿಫಾರಸು ಮಾಡಿದೆ. ಇವು ಮಕ್ಕಳಲ್ಲಿ ಅತೀ ಸಾಮಾನ್ಯವಾದ ಮಾರಣಾಂತಿಕ ಕಾಯಿಲೆಗಳಿಂದ ರಕ್ಷಿಸುತ್ತವೆ. ಇವು ಸುರಕ್ಷಿತ, ಯಾವ ಗಂಭಿರವಾದ ದುಷ್ಪಪರಿಣಾಮಗಳಿಲ್ಲ. ಗ್ರಾಮಿಣ ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ. ಇಂಥ ಲಸಿಕೆ, ರಕ್ಷಿಸುವ ಕಾಯಿಲೆ, ಡೋಸ್ ವಿವರ ಹೀಗಿವೆ:

- ಹೆಚ್.ಬಿ.ವಿ (ಬಿ ಕಾಮಾಲೆ ತಡೆಗೆ) ಹುಟ್ಟಿದ ತಕ್ಷಣ ಮತ್ತು 3 ಬೂಸ್ಟರ್ ಡೋಸ್ ಪೆಂಟಾವೆಲೆಂಟ್ ರೂಪದಲ್ಲಿ.
- ಬಿ.ಸಿ.ಜಿ.(ಕ್ಷಯರೋಗ) ಹುಟ್ಟಿದ ದಿನ, ಒಂದೇ ಸಲ.
- ಪೋಲಿಯೊ ಹನಿ ಹುಟ್ಟಿದ ದಿನ, ನಂತರ ಮೂರು ಬೂಸ್ಟರ್ ಡೋಸ್ ಒಂದೂವರೆ, ಎರಡೂವರೆ, ಮೂರೂವರೆ ತಿಂಗಳಲ್ಲಿ.

*ಪೆಂಟಾವೆಲೆಂಟ್ (5 ಕಾಯಿಲೆಗೆ ಒಂದೇ ಇಂಜೆಕ್ಷನ್‌ನಲ್ಲಿ. ಗಂಟಲು ಬೇನೆ,